## 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ - ಮೈಸೂರು.

**ಎಸ್.ಸಿ. ಸಂಖ್ಯೆಃ 110/2017**

**ಫಿರ್ಯಾದುದಾರರುಃ** ಕರ್ನಾಟಕ ರಾಜ್ಯ ಸರ್ಕಾರ
ವಿ ವಿ ಪುರಂ ಪೋಲೀಸ ಠಾಣೆಯ ಮೂಲಕ

ಃ ವಿರುದ್ಧ ಃ

**ಆರೋಪಿತರು** ಃ ಎ1 ಹೇಮಂತ ಹಾಗೂ ಇತರರು

**-ಃ ದೋಷಾರೋಪಣೆ ಃ-**

ಶ್ರೀ ಎನ್. ಕೃಷ್ಣಯ್ಯ ಬಿಎಸ್‌ಸಿ., ಎಲ್ ಎಲ್ ಬಿ, 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮೈಸೂರು, ಆದ ನಾನು,

ಆರೋಪಿತರಾದಃ-

1. ಹೇಮಂತ ಬಿನ್ ರೇವಣ್ಣ
   29 ವರ್ಷ, ನಂ 15/1 ಬಿ, 4 ನೇ ಮೈನ್, 5 ನೇ ಕ್ರಾಸ, ವಿನಾಯಕನಗರ, ಮೈಸೂರು
2. ಸಂಜು ಅಲಿಯಾಸ್ ಸ್ಯಾಮಸನ್ ಬಿನ್ ನಿಕೋಲಸ್
   29 ವರ್ಷ, ನಂ 301 ದ ನಂದಿ ರಸ್ತೆ, ಚಾಮುಂಡಿಬೆಟ್ಟ
3. ಸಂದೇಶ ಬಿನ್ ಚೆನ್ನಬಸವ,
   23 ವರ್ಷ, 2453, 3 ನೇ ಕ್ರಾಸ್, ವಿನಾಯಕ ನಗರ, ಮೈಸೂರು
4. ಮೂರ್ತಿ ಅಲಿಯಾಸ್ ಕಾಟು ಬಿನ್ ಲೇಟ್ ಶ್ರೀನಿವಾಸ
   26 ವರ್ಷ, ನಂ 180/ಎ, 6 ನೇ ಮೈನ್, 4 ನೇ ಕ್ರಾಸ್, ವಿನಾಯಕನಗರ, ಮೈಸೂರು
5. ಧರ್ಮೇಂದ್ರ ಅಲಿಯಾಸ್ ಅಪ್ಪಾಜಿ ಬಿನ್ ಲೇಟ್ ರಾಜು
   27 ವರ್ಷ, ನಂದಿ 143, ಹೊಸ ಸೈಟ್ ಹತ್ತಿರ, ಸಿದ್ದರಾಮನಹುಂಡಿ, ಮೈಸೂರು ತಾಲುಕು
6. ಭರತ್ ಕುಮಾರ ಅಲಿಯಾಸ್ ಬಾಲು, ರೇವಣ್ಣ
   24 ವರ್ಷ, ನಂ 15/1 ಬಿ, 4 ನೇ ಮೈನ್, 5 ನೇ ಕ್ರಾಸ್, ವಿನಾಯಕನಗರ, ಮೈಸೂರು
7. ಅಶೋಕ ಬಿನ್ ಗಿರಿಗೌಡ
   34 ವರ್ಷ, ನಂ 12/48, 6 ನೇ ಮೈನ್, 4 ನೇ ಕ್ರಾಸ್, ವಿನಾಯಕನಗರ, ಮೈಸೂರು
8. ತಿಮ್ಮಿ ಅಲಿಯಾಸ್ ಕಾರ್ತಿಕ್ ಬಿನ್ ಲೇಟ್ ಸ್ವಾಮಿ
   23 ವರ್ಷ, ನಂ 2271, 6 ನೇ ಮೈನ್, 5 ನೇ ಕ್ರಾಸ್, ವಿನಾಯಕನಗರ, ಮೈಸೂರು

9. ಸೂರಜ್ ಬಿನ್ ಮರವಣ್ಣ
25 ವರ್ಷ, ನಂ 1870, ಮಾತಾ ಅಮೃತಾನಂದಮಯಿ ಕಾಲೇಜು ರಸ್ತೆ, ಬೋಗಾದಿ 2 ನೇ ಹಂತ, ಮೈಸೂರು ದಕ್ಷಿಣ

10. ಮಂಜೇಶ್ ಬಿನ್ ಸಿ ಚಿಕ್ಕಣ್ಣ
31 ವರ್ಷ, ನಂ 2508, 6 ನೇ ಕ್ರಾಸ್, 3 ನೇ ಮೈನ್, ವಿನಾಯಕನಗರ, ಮೈಸೂರು

11. ಶ್ರೀನಿವಾಸ ಅಲಿಯಾಸ್ ಕುಂಡ ಶೀನ್ ಬಿನ್ ಗೋವಿಂದನಾಯಕ
34 ವರ್ಷ, ನಂ 2508, 6 ನೇ ಕ್ರಾಸ್, 3 ನೇ ಮೈನ್, ವಿನಾಯಕನಗರ, ಮೈಸೂರು

12. ಭರತ್ ಎಂ ಆರ್ ಬಿನ್ ರಾಮಚಂದ್ರ
27 ವರ್ಷ, ನಂ 65, ಶ್ರೀನಿವಾಸ ನೀಲಯ, ಸಂಗಂ ಸರ್ಕಲ್ ಹತ್ತಿರ, ಮಂಚೇಗೌಡನಕೊಪ್ಪಲು ಮೈಸೂರು

ನಿಮ್ಮ ವಿರುದ್ಧ ಮಾಡಲಾದ ದೋಷಾರೋಪಣೆ ಏನೆಂದರೆ:-

1 ರಿಂದ 12 ನೇ ಆರೋಪಿಗಳಾದ ನೀವು ಪಡುವಾರಳ್ಳಿಯ ದೇವು ಅಲಿಯಾಸ್ ದೇವೆಂದ್ರನ ಸಹಚರಾಗಿದ್ದು ಈ ಹಿಂದೆ ಪಡುವಾರಳ್ಳಿಯ ನಡೆದ ದೇವು ಅಲಿಯಾಸ್ ದೇವೆಂದ್ರನ ಕೊಲೆ ಕೇಸಿನಲ್ಲಿ ಪಡವರಹಳ್ಳಿಯ ವಾಸಿಯಾದ ಕೃಷ್ಣ ಅಲಿಯಾಸ್ ಬೆಣ್ಣೆ ಕೃಷ್ಣನು ಅಗತ್ಯ ಸಹಾಯ ಮತ್ತು ಸಹಕಾರ ನೀಡಿರುತ್ತಾನೆಂದು ಹಾಗೂ ನಮ್ಮಗಳ ಮೇಲೂ ಸಹ ದಾಳಿ ಮಾಡಿಸಿ ಕೊಲೆ ಮಾಡಿಸುತ್ತಾನೆಂದು ಭಾವಿಸಿ ಸದರಿ ಕೃಷ್ಣನನ್ನು ಕೊಲೆ ಮಾಡವ ಸಮಾನ ಉದ್ದೇಶದಿಂದ 1 ರಿಂದ 9 ಮತ್ತು 12 ನೇ ಆರೋಪಿಗಳಾದ ನೀವು 5 ನೇ ಆರೋಪಿಗೆ ಸೇರಿದ ಕೇರಗಳ್ಳಿಯಲ್ಲಿ ಇರುವ ಬಾಡಿಗೆ ಮನೆಯಲ್ಲಿ ದಿನಾಂಕ 13.12.2016 ರಂದು ಕೃಷ್ಣನನ್ನು ಕೊಲೆ ಮಾಡುವ ಸಂಬಂಧ ವಿವಿಧ ರೀತಿಯಲ್ಲಿ ಸ್ಥಳ ಮತ್ತು ದಿನಾಂಕವನ್ನು 6 ನೇ ಆರೋಪಿಯ ಮಾರ್ಗದರ್ಶನದಂತೆ ನೀಗದಿ ಮಾಡಿ ಸಂಚು ರೂಪಿಸಿದಿರಿ ಎಂಬುದಾಗಿ ನಿಮ್ಮ ಮೇಲೆ ಬಾ.ದಂ.ಸಂ. ಕಲಂ 120-ಬಿ ಸಹ ಕಲಂ 34ರ ಅಡಿಯಲ್ಲಿ ನಿಮ್ಮಗಳನ್ನು ಶಿಕ್ಷಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ 10 ಮತ್ತು 11 ನೇ ಆರೋಪಿಯಾದ ನೀವು 1 ನೇ ಆರೋಪಿಯೊಂದಿಗೆ 12 ನೇ ಆರೋಪಿಯ ಮೊಬೈಲ ಪೋನ ಮೂಲಕ ಸಂಪರ್ಕ ಸಾಧಿಸಿ ಸದರಿ ಕೃಷ್ಣನನ್ನು ಕೊಲೆ ಮಾಡಲು ಉಳಿದ ಆರೋಪಿಗಳಿಗೂ ದುಷ್ಪ್ರೇರಣೆ ನೀಡಿದ್ದು ಸದರಿ ಕೃತ್ಯವು ಬಾ.ದಂ.ಸಂ. ಕಲಂ 109 ಸಹ ಕಲಂ 34ರ ಅಡಿಯಲ್ಲಿ ನಿಮ್ಮಗಳನ್ನು ಶಿಕ್ಷಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೇಯದಾಗಿ ದಿನಾಂಕ 13.12.2016 ರಂದು ಮೃತ ಕೃಷ್ಣನನ್ನು ಹೋಟೇಲ್ ಹೈವೆ 18ರ ಬಳಿ ಟಿ ಕುಡಿಯುತ್ತಿರುವುದನ್ನು 6 ನೇ ಆರೋಪಿಯಾದ ನೀನು

ನೋಡಿಕೊಂಡು ಸೂಚನೆ ನೀಡಿದ ಮೇರೆಗೆ 1 ರಿಂದ 5ನೇ ಆರೋಪಿಗಳಾದ ನೀವು ಮೊದಲೆ ನೀಗದಿ ಮಾಡಿಕೊಂಡಿದ್ದ ಸ್ಯಾಂಟ್ರೋ ಕಾರಿನಲ್ಲಿ ಮಾರಕಾಸ್ತ್ರಗಳ ಸಮೇತ ಹೊರಟು ವಿವಿ ಮೊಹಲ್ಲಾದ 6 ನೇ ಮುಖ್ಯ ರಸ್ತೆಯಲ್ಲಿರುವ ಧಾತ್ರಿ ಬ್ಲೂ ಟೇಕ್ ಬಳಿ 10-20 ರಿಂದ 10-30 ಗಂಟೆ ನಡುವೆ ನಿಮ್ಮ ಎದರುಗಡೆಯಿಂದ ಬರುತ್ತಿದ್ದ ಮೃತ ಕೃಷ್ಣನ ದ್ವಿಚಕ್ರ ವಾಹನ ಹೊಂಡಾ ಎಕ್ಟಿವ್ ಸ್ಕೂಟರ ಅದರ ಸಂಖ್ಯೆ ಕೆಎ09 ಎಚ್ ಬಿ 2770 ವಾಹನಕ್ಕೆ ಡಿಕ್ಕಿ ಹೊಡೆದ ತಕ್ಷಣ ಸದರಿ ಕೃಷ್ಣ ವಾಹನದಿಂದ ಕೆಳಗೆ ಬಿದ್ದ ನಂತರ 1 ರಿಂದ 5 ನೇ ಆರೋಪಿತರಾದ ನೀವು ಆತನನ್ನು ಕೊಲೆ ಮಾಡುವ ಸಮಾನ ಉದ್ದೇಶದಿಂದ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿದ್ದಕ್ಕೆ ಆತ ಸ್ಥಳದಲ್ಲಿ ಸಾಯುತ್ತಾನೆಂದು ತಿಳಿದು ಸದರಿ ಕೃಷ್ಣನಿಗೆ ಮಾರಕಾಸ್ತ್ರಗಳಿಂದ ಮಾರಣಾಂತಿಕ ಹಲ್ಲೆ ಮಾಡಿ ಗಾಯಗೋಳಿಸಿ ನಂತರ ಆತನನ್ನು ಅಪೋಲಾ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಬೆಳಿಗ್ಗೆ 11-40 ಕ್ಕೆ ಸದರಿ ಕೃಷ್ಣ ಮೃತಪಟ್ಟಿದ್ದು ಆತನ ಕೊಲೆ ಮಾಡಿದ್ದು ಸದರಿ ಕೃತ್ಯವು ಬಾ.ದಂ.ಸಂ. ಕಲಂ 302 ಸಹ ಕಲಂ 34ರ ಅಡಿಯಲ್ಲಿ ನಿಮ್ಮಗಳನ್ನು ಶಿಕ್ಷಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ನಾಲ್ಕನೇಯದಾಗಿ ನಂತರ 1 ರಿಂದ 5 ನೇ ಆರೋಪಿಗಳಾದ ನೀವು ಸಾಕ್ಷ್ಯ ನಾಶಪಡಿಸುವ ಸಮಾನ ಉದ್ದೇಶದಿಂದ ಕೃತ್ಯಕ್ಕೆ ಬಳಸಿದ್ದ ಮೊಬೈಲ ಪೋನಗಳನ್ನು ಬಿಸಾಡಿ, ಕೃತ್ಯ ನಡೆದ ನಂತರ ಸ್ಯಾಂಟ್ರೋ ಕಾರನ್ನು ಮಳವಳ್ಳಿ ಬಳಿ ಬಿಟ್ಟು ಅಲ್ಲಿಂದ ಮುಂದೆ ಸತ್ತೆಗಾಲದ ಬ್ರಿಡ್ಜ ಬಳಿ ಕೃತ್ಯಕ್ಕೆ ಬಳಸಿದ್ದ ಆಯುಧಗಳನ್ನು ಬಚ್ಚಿಟ್ಟು, ಅಲ್ಲಿಂದ ಮಲೆಮಹದೇಶ್ವರ ಬೆಟ್ಟಕ್ಕೆ ಬಂದು ಭಾರತಿ ಲಾಡ್ಜನಲ್ಲಿ ಆರೋಪಿತರಾದ ನೀವು ನಿಮ್ಮ ಇರುವಿಕೆಯನ್ನು ಮರೆ ಮಾಚಿ ಉಳಿದುಕೊಳ್ಳಲು ರೂಂ ನ್ನು ಪಡೆಯುವ ಸಂಬಂಧ ಭಾರತಿ ಲಾಡ್ಜನ ರಜಿಸ್ಟರನ ಲೆಡ್ಜರನಲ್ಲಿ ಸುಳ್ಳು ವಿಳಾಸ ಬರೆದು ರೂಂ ನ್ನು ಪಡೆದುಕೂಂಡು ನಂತರ ಕೃತ್ಯದ ಸಮಯದಲ್ಲಿ ಧರಿಸಿದ್ದ ರಕ್ತಸಿಕ್ತ ಬಟ್ಟೆಗಳನ್ನು ಬೆಟ್ಟದಲ್ಲಿನ ತೋಟಗಾರಿಕೆ ಇಲಾಖೆಗೆ ಸೇರಿದ ಒಂದು ಭಾವಿಯ ಬಳಿ ಬಿಸಾಡಿ ಸಾಕ್ಷ್ಯದಾರಗಳನ್ನು ನಾಶಮಾಡಿದ್ದು ಸದರಿ ಕೃತ್ಯವು ಬಾ.ದಂ.ಸಂ. ಕಲಂ 201 ಸಹ ಕಲಂ 34ರ ಅಡಿಯಲ್ಲಿ ನಿಮ್ಮಗಳನ್ನು ಶಿಕ್ಷಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲೆ ಹೇಳಿದ ಆರೋಪಗಳಡಿ ವಿಚಾರಣೆಯನ್ನು ಮಾಡಲು ಈ ನ್ಯಾಯಾಲಯಕ್ಕೆ ಅಧಿಕಾರವಿರುತ್ತದೆ, ಆದ್ದರಿಂದ ನೀವು ಈ ಆರೋಪಗಳಡಿ ವಿಚಾರಣೆಗೆ ಒಳಪಡತಕ್ಕದ್ದೆಂದು ಈ ದಿನ ಅಂದರೆ ದಿನಾಂಕಃ 20.06.2018 ರಂದು ನಿರ್ದೇಶಿಸುತ್ತೇನೆ.

(ಎನ್ ಕೃಷ್ಣಯ್ಯ)
4ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಮೈಸೂರು.

4ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ - ಮೈಸೂರು.

ಎಸ್.ಸಿ. ಸಂಖ್ಯೆ: 110/2017

**ಫಿರ್ಯಾದುದಾರರು:** ಕರ್ನಾಟಕ ರಾಜ್ಯ ಸರ್ಕಾರ
ವಿ ವಿ ಪುರಂ ಪೋಲೀಸ ಠಾಣೆಯ ಮೂಲಕ

: ವಿರುದ್ಧ :

**ಆರೋಪಿತರು** : ಎ 12 ಭರತ್ ಎಂ ಆರ್ ಬಿನ್ ರಾಮಚಂದ್ರ

: ಆರೋಪಿ ಹೇಳಿಕೆ :

ಪ್ರಶ್ನೆ:- 1) ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಯನ್ನು ಕನ್ನಡದಲ್ಲಿ ರಚಿಸಿ ವಿವರಿಸಲಾಗಿದೆ, ಇದು ನಿಮಗೆ ಅರ್ಥವಾಯಿತೆ?

ಉತ್ತರ:

ಪ್ರಶ್ನೆ:- 2) ಈ ದೋಷಾರೋಪಣೆಗೆ ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ನಡೆಯಬೇಕೊ?

ಉತ್ತರ:

ಆರೋಪಿಯು ಕೊಟ್ಟ ಉತ್ತರವನ್ನು ನನ್ನ ಸ್ವಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತೆಂದು ನಾನು ಈ ದಿನ ಅಂದರೆ ದಿ: 20.06.2018 ರಂದು ದೃಢೀಕರಿಸುತ್ತೇನೆ.

(ಎನ್. ಕೃಷ್ಣಯ್ಯ)
4ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.